# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1811 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24.03.2020 |
| ಉತ್ತರಿಸುವ ಸಚಿವರು. | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಲ್ಟಿಪ್ಲೆಕ್ಸ್‌ಗಳಲ್ಲಿ ಮಾರಾಟ ಮಾಡುವ ತಿಂಡಿ-ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿಯಾಗಿ ಅಧಿಕ ದರ ವಿಧಿಸಲು ನಿಯಮಗಳಲ್ಲಿ ಅವಕಾಶವಿದೆಯೇ; | ಇಲ್ಲ.<br><br>ಈ ರೀತಿ ಅಧಿಕ ದರ ವಿಧಿಸುವುದು ಪೊಟ್ಟಣ ಸಾಮಗ್ರಿ ನಿಯಮ 2011ರ ಅಡಿಯಲ್ಲಿ ಅಪರಾಧವಾಗಿರುತ್ತದೆ. |
| (ಆ) | ತಿಂಡಿ-ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವ ಮಲ್ಟಿಫ್ಲೆಕ್ಸ್‌ಗಳ ಲೈಸನ್ಸ್ ರದ್ದು ಮಾಡಲು ಸರ್ಕಾರ ಚಿಂತಿಸಿದೆಯೇ; ಇಲ್ಲವಾದ್ದಲ್ಲಿ, ಅಂತಹ ಮಲ್ಟಿಫ್ಲೆಕ್ಸ್ ಗಳ ಮೇಲೆ ಯಾವ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ; | ತಿಂಡಿ-ತಿನಿಸು ಪಾನೀಯಗಳನ್ನು ಮಾರಾಟ ಮಾಡಲು ನಗರ ಪಾಲಿಕೆಗಳು ಹಾಗೂ ಆರೋಗ್ಯ ಇಲಾಖೆ ಲೈಸೆನ್ಸ್ ನೀಡುವ ಪ್ರಾಧಿಕಾರವಾಗಿರುತ್ತವೆ. ಸದರಿ ಲೈಸೆನ್ಸ್ ಗಳನ್ನು ರದ್ದು ಮಾಡಲು ಕಾನೂನು ಮಾಪನಶಾಸ್ತ್ರ ಇಲಾಖೆಯ ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಹಾಗೂ ಈ ರೀತಿಯ ಪ್ರಸ್ತಾವ ಇರುವುದಿಲ್ಲ.<br>ಕಾನೂನು ಮಾಪನಶಾಸ್ತ್ರ ನಿಯಮಗಳನುಸಾರ, ಮುದ್ರಿತ ದರಕ್ಕಿಂತ ಅಧಿಕ ಬೆಲೆಗೆ ಮಾರಾಟ ಮಾಡುವ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಮೊಕದ್ದಮೆ ಹೂಡಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| (ಇ) | ಕಳೆದ 2 ವರ್ಷಗಳಲ್ಲಿ ತಿಂಡಿ-ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವ ಮಲ್ಟಿಫ್ಲೆಕ್ಸ್ ಚಿತ್ರಮಂದಿರಗಳ ವಿರುದ್ಧ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ? (ಜಿಲ್ಲಾವಾರು ವಿವರ ನೀಡುವುದು) | ಕಳೆದ 2 ವರ್ಷಗಳಲ್ಲಿ ಮಲ್ಟಿಪ್ಲೆಕ್ಸ್‌ಗಳಲ್ಲಿ ಮಾರಾಟ ಮಾಡುವ ಪೊಟ್ಟಣ ಸಾಮಗ್ರಿಯ ರೂಪದ ತಿಂಡಿ-ತಿನಿಸು ಪಾನೀಯಗಳಿಗೆ ಮಾರುಕಟ್ಟೆ ದರಕ್ಕಿಂತ ಅಧಿಕ ದರ ವಿಧಿಸುತ್ತಿರುವ ಮಲ್ಟಿಫ್ಲೆಕ್ಸ್ ಚಿತ್ರಮಂದಿರಗಳ ವಿರುದ್ಧ ಈ ಕೆಳಕಂಡಂತೆ ಪ್ರಕರಣಗಳನ್ನು (ಜಿಲ್ಲಾವಾರು) ದಾಖಲಿಸಲಾಗಿದೆ. |

| ಜಿಲ್ಲೆ | ತಪಾಸಣೆ | ಹೂಡಿದ ಮೊಕದ್ದಮೆ | ವಸೂಲಾದ ದಂಡ |
|---|---|---|---|
| 2018-19 | | | |
| ಬೆಂಗಳೂರು ಜಿಲ್ಲೆ | 15 | 03 | 20,000 |
| ಮೈಸೂರು ಜಿಲ್ಲೆ | 01 | 01 | 5,000 |
| ಉಡುಪಿ ಜಿಲ್ಲೆ | 02 | - | - |
| ಒಟ್ಟು | 18 | 04 | 25,000 |
| 2019-20 | | | |
| ಬೆಂಗಳೂರು ಜಿಲ್ಲೆ | 16 | 1 | - |
| ಒಟ್ಟು | 16 | 1 | - |

ಆನಾಸ 119 ಡಿಆರ್‌ಎ 2020 (ಇ-ಆಫೀಸ್)

(ಕೆ. ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು